SRI B. RAMAIAH. (Minister for Rural Development and Panchayat raj).—

(a) The Programmes like supply of Milching cows poultry, supply of bullock cart, irrigation tanks and digging of wells, supply of pumsets and sheep breeding etc., are being undertaken.

(b) The financial assistances to the extent of Rs. 3,98,923.20 np. has been paid to 781 persons so far. Out of this 252 persons are belonging to Backward Classes. The particulars are as follows.

Sl. No.	Programme	The no. of persons benefitted		The amount of financial and spent since its inception	
		Total	Out of this belonging to backward class community	Total	Out of this belonging to backward class community
1.	Pump sets	14	...	16,201.25	...
2.	Bullock cart	1	...	1,311.80	...
3.	Sheeps	7	1	6500.00	750.00
4.	Irrigation Well	1	...	3,000.00	...
5.	Milching cows	738	251	3,69,550.50	1,50,373.43
6.	Crop extent	20	...	2,359.85	...
	Total	781	252	3,98,923.20	1,51,123.43

(c) Yes.

(d) The Financial Assistance of Rs. 16,225.00 has been given to 25 persons. A sum of Rs. 49,850,00 has been sanctioned towards Loan to 25 persons. As the Society has to fulfill certain conditions to Bank, loan has not been sanctioned to all of them.

(e) The Project Director of Belgaum District has already taken action in this regard.

CALLING ATTENTION TO A MATTER OF URGENT PUBLIC IMPORTANCE

Demand of Security Deposit by K.E.B.

SRI A. LAKSHMI SAGAR (Chickpet)—Sir, I call the attention of the Hon. Minister of State for Power regarding the inconvenience caused to the consumers due to the demand of Security amounts by the Karnataka Electricity Board.

SRI G.H. ASWATH REDDY (Minister of State for Power)—Sir, I wish to make the following statement.

The Karnataka Electricty Board have framed the Electricity Supply Regulations in accordance with the powers vested under Section 79 (J) of the Electricity (Supply, Act, 1948. The demand for Security amounts is in accordance with these regulations. As such, this demand cannot be termed as illegal or anauthorised.

The domestic installations such as lighting, All Electric Homes and I.P. Sets, street lights of villages and Town Panchayats. Water Supply installations have been exempted from the payment of Security amount(As such, the demand for security amount has not affected the poor and middle class people. The Security amount is payable only by categories of consumers coming under L.T. Power, L.T. Commercial and H.T. installations.

Further the consumers have been given the facility of paying the amount in five monthly instalments. Field officers have also been instructed not to disconnect powersupply for non-payment of Security amount till March 1982. Thus, no hardship has been caused.

SRI. A. LAKSHMI SAGAR.—Sir, the security amounts that are now being demanded from commercial consumers of electricity are as follows. The following are the phased rates for non domestic installations. For single phase installations, Rs. 180 For 3-phased installation, it is Rs. 520 for H.T installation up to 13 Kv, it is Rs. 13,500 for 33 Kv it is Rs. 23,600 for 66 Kv, it is Rs.54,000 for 110Kv it is Rs. 1,24,400 and for 220 Kv, it is Rs: 2,11,590. This is the tariff for collection of security amounts. Sir, the power of the Board to demand security amount is not there in the Electricity Act. Section 26 of the Indian Electricity Act of 1910 does not speak of the expression 'security amount'. All that the Board now has done is, they have amended the regulations enabling them to demand the security amounts from the commercial consumers. The second point is, the Board is not a taking authority. The main act gives them revised tariff only. I have personally visited Kerala and Tamilnadu and these security amounts are unknown in those states. If they are not entitled to levy the security amounts, it is in the nature of a tax. K.E.B is not a taxing authority. And these security amounts are not refundable. These security amounts cannot be adjusted towards the payment of monthly current bills. They even do not carry interest. That is why the expression 'security amount' has been very ingeniously used. They could not use the word 'security deposit because interest will have to be paid upon it.

Therefore, *prima facia* this demand for payment of security amounts is unauthorised, illegal. I would like to ask what is the rationale behind fixation of these amounts ? For single phased installation, it is Rs. 180. Even a small shop keeper having only one holder and one bulb has got to pay Rs. 180 by way of security amount Thousands and lakhs of people have got to pay this. Thousands of poor people who are employed in small commercial jobs are affected. The security amount, as they are now termed, has affected large sections of the consumers. The matter is now in the Court. I think some consumers have filed writ petitions and obtained stay. What is the rationale or nexus between the cost of metering and other equipments and demanding the security amounts of Rs. 180 for single phased installations ? The meters were installed even 30 or 40 years ago. In most of the cases, these meters have already been purchased and in some cases they are collecting the rent. The cost of every piece of installation is met by the non-domestic consumers. There is no rationable behind fixing this amounts.

In 1979 also they collected security amounts and now from 1st November 1981 they are demanding security amounts and this will become an annual feature from 1983 onwards. Collecting of security amounts once, I can understand. They have collected in 1979 and now in 1981 and it will be a regular annual feature from 1983 onward This is an absurdity of the demand that is being made by the KEB

In the year 1981-82, the Government has not been able to pay the agreed amount for electrification work by the KEB. Up to December 1981, according to my information, no amount has been paid by the Government as agreed to after consultation with the Planning Commission officicials and the Central Government. Because of the inabilty of the Government to honour its commitment of financing the KEB they have resorted to this move of forcing this illegal levy on consumers and the Government has given approval to these regulations. Therefore, I say firstly the matter is pending before the Court. So, kindly wait till the decision is rendered by the High Court. Till then please keep this demand in abeyance. Secondly, if you are convinced of the resonableness of my argument, kindly withdraw it. Thirdly, the Government must pay the committed amount to KEB so that the KEB need not go in for security amounts.

ಶ್ರೀ ಪಿ. ರಾಂದೇವ್ (ಮಲ್ಲೇಶ್ವರಂ)—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮುಂದೆ ಇರತಕ್ಕಂಥಾ ವಿಷಯ ಈ ವಿದ್ಯುಚ್ಛಕ್ತಿ ಮಂಡಲಿಯವರು ಇತ್ತೀಚೆಗೆ ಜನಗಳಿಂದ ಏನೊಂದು ಠೇವಣಿಯನ್ನು ಸಂಗ್ರಹಿಸುತ್ತಾ ಇದ್ದಾರೆ ಇದು ಅನ್ಯಾಯ, ಅಕ್ರಮವಾಗಿದೆ ಎನ್ನುವುದನ್ನು ಹೇಳುತ್ತಾ ಇದ್ದೇವೆ. ಈಗತಾನೇ ಮಾನ್ಯ ವಿದ್ಯುಚ್ಛಕ್ತಿ ಮಂತ್ರಿಗಳು ಇದರ ಬಗ್ಗೆ ಹೇಳಿಕೆ ಕೊಟ್ಟಿದ್ದಾರೋ ಆ ಹೇಳಿಕೆಯನ್ನು

ನೋಡಿದರೆ ಇವರು ಉಪಾಧ್ಯಾಯರು ಆಗಿದ್ದರು ಅಂತ ಕಾಣುತ್ತದೆ. ಏಕೆಂದರೆ ಅವರು ಹೇಳಿಕೊಟ್ಟಂಥಾ ಪಾಠವನ್ನು ಗಿಳಿ ಪಾಠವಾಗಿ ಇವರು ಇಲ್ಲಿ ಒಪ್ಪಿಸಿದ್ದಾರೆ. ಹೊಸ ವಿಷಯ ಇದರಲ್ಲಿ ಏನೂ ಇಲ್ಲ. ನಾವು ಕೇಳುವುದು ಇಷ್ಟೇ ಈಗ ಮಂಡಲಿಯವರು ಸಂಗ್ರಹಿಸುತ್ತಿರುವ ಶೇವಣಿಯನ್ನು ಇಟ್ಟಿದ್ದಾರೋ ಆ ಬಡಜನಗಳಿಂದ ಅದು ಬಹಳ ಅನ್ಯಾಯವಾದದ್ದು, ಅಕ್ರಮವಾದದ್ದು ಇದನ್ನ ನಿಲ್ಲಿಸಬೇಕೆಂದು ಕೇಳುತ್ತೇವೆ. ಮಾನ್ಯ ವಿದ್ಯುಚ್ಛಕ್ತಿ ಮಂತ್ರಿಗಳು ಈ ಖಾತೆಯಲ್ಲಿ ಮಂತ್ರಿಯಾಗಿದ್ದುಕೊಂಡು ವಿದ್ಯುಚ್ಛಕ್ತಿಯಂತೆ ಏನು ಒಂದು ಸೆನ್ಸಿಟಿವಿಟಿಯಾಗಿ ಕೆಲಸ ಮಾಡಬೇಕಾಗಿತ್ತೋ ಆರೀತಿ ಇಲ್ಲ ; ಎಂದು. ಮಾನ್ಯ ಲಕ್ಷ್ಮೀಸಾಗರ್‌ರವರು ಇದರ ಲೀಗಾಲಿಟಿ ಬಗ್ಗೆ ಮಾತನಾಡಿದರು ಆದರೆ ಮಾನ್ಯ ಮಂತ್ರಿಗಳು ಇದರ ಬಗ್ಗೆ ಅಷ್ಟು ಸೆನ್ಸಿಟೀವ್ ತೋರಿಸಲಿಲ್ಲಾ. ಆ ಬಡಜನಗಳು ಇದರ ಬಗ್ಗೆ ತಮ್ಮ ತಾಪತ್ರಯ ಹೇಳಿಕೊಂಡರೂ ಸಹ, ತಮ್ಮ ಗೋಳನ್ನು ಅವರ ಮುಂದೆ ಹೇಳಿಕೊಂಡರೂ ಸಹ ಇದನ್ನು ಮಂಡಲಿಯವರು ತಮ್ಮ ಗಮನಕ್ಕೆ ತೆಗೆದುಕೊಳ್ಳದೆ ಶೇವಣಿ ಬಗ್ಗೆ ಇಂತಹ ಒಂದು ತೀರ್ಮಾನ ತೆಗೆದುಕೊಂಡಿರ ತಕ್ಕಂಥಾದ್ದು ಬಹಳ ಅನ್ಯಾಯ ಹಾಗೂ ಅಕ್ರಮವಾಗಿದೆ ಎಂದು ಹೇಳುತ್ತೇನೆ. ಈ ವಿಚಾರದಲ್ಲಿ ನಾನೂ ಸಹ ಒಂದು ಕಾಗದವನ್ನು ಮಾನ್ಯ ಮಂತ್ರಿಗಳಿಗೆ ಬರೆದಿದ್ದರೂ ಕೂಡ ಇದುವರೆಗೆ ಅವರಿಂದ ನನಗೆ ಉತ್ತರವೇ ಬಂದಿಲ್ಲ. ನಾವು ಶಾಸಕರಾಗಿದ್ದುಕೊಂಡು ನಾವು ಬರೆದ ಕಾಗದಕ್ಕೆ ಉತ್ತರ ಕೊಡತಕ್ಕಂಥಾ ಒಂದು ಸೌಜನ್ಯವನ್ನು ಹಾಗೂ ಸಭ್ಯತೆಯನ್ನು ತೋರಿಸದೆ ಹೋದರೆ, ಸರಕಾರ ಎಮ್ಮೆ ತಮ್ಮಣ್ಣನ ಹಾಗೆ ಇದ್ದರೆ ಹೇಗೆ ಸ್ವಾಮಿ ? ನಾವು ಕಾಗದ ಬರೆಯುವುದು ಏತಕ್ಕೆ ಸ್ವಾಮಿ ? ಜನಗಳ ಕಷ್ಟಗಳನ್ನೂ ಗೊಂದಲಗಳನ್ನೂ ಮಂತ್ರಿಗಳಿಗೆ ಕಾಗದ ಬರೆದು ತಿಳಿಸಿದರೆ ಅದಕ್ಕೆ ಅವರು ಒಂದು ಉತ್ತರವನ್ನು ಬರೆಯುವ್ಷದಕ್ಕೆ ಆಗದೇ ಹೋದ ಮೇಲೆ ಇವರು ಏತಕ್ಕೆ ಆ ಮಂತ್ರಿಗಳಾಗಿರಬೇಕು ಸ್ವಾಮಿ ? ಇದನ್ನು ನೋಡಿದರೆ ನನಗೆ ಬಹಳ ದುಃಖವಾಗುತ್ತದೆ. ಈ ಪ್ರಶ್ನೆ ಜನಗಳ ಕಷ್ಟವನ್ನು ಹೇಳಿಕೊಳ್ಳತಕ್ಕಂಥಾ ಪ್ರಶ್ನೆ. ನಾಳೆ ಇದು ಮಂಡಲಿಯ ಮುಂದೆ ಬರತಕ್ಕಂಥಾ ಪ್ರಶ್ನೆ. ಈ ಕೆ.ಇ.ಬಿ. ಅವರು ಇದರ ಬಗ್ಗೆ ಏನು ಒಂದು ಸೆನ್ಸಿವಿಟಿಯಾಗಿ ಕೆಲಸ ಮಾಡಬೇಕು. ಹಾಗೆ ಮಾಡದೇ ಹೋದರೆ ಜನಗಳಿಗೆ ಬಹಳ ಕಷ್ಟವಾಗುತ್ತದೆ, ಈ ಇಲಾಖೆ ಅತ್ಯಂತ ಚುರುಕಾಗಿ ಕೆಲಸ ಮಾಡಬೇಕು.

ಶ್ರೀ ಬಿ. ಅಶ್ವತ್ಥ್‌ರೆಡ್ಡಿ.—ತಾವು ಬರೆದ ಕಾಗದಕ್ಕೆ ಉತ್ತರ ಬರೆದಿದ್ದೇನೆ. ಆ ಕಾಗದವನ್ನು ತಾವು ನೋಡಿ.

ಶ್ರೀ ಪಿ. ರಾಂದೇವ್.—ನನಗೆ ಆ ಕಾಗದ ಬಂದಿಲ್ಲ. ನಾನು ಹೇಳುವುದು ಇಷ್ಟೆ. ಮಾನ್ಯ ಅಶ್ವತ್ಥ್‌ರೆಡ್ಡಿಯವರು ವಿದ್ಯುಚ್ಛಕ್ತಿ ಮಂತ್ರಿಗಳಾಗಿದ್ದುಕೊಂಡು ಎಲೆಕ್ಟ್ರಿಸಿಟಿ ಯಾವರೀತಿ ಸೆನ್ಸಿಟೀವ್ ಆಗಿ ಇರುತ್ತದೋ ಆರೀತಿ ಇಲ್ಲ ಎಂದು ಮತ್ತೆ ಹೇಳಬೇಕಾಗಿದೆ. ಇದರಿಂದ ಆ ಬಡಜನಗಳಿಗೆ ಆಗಿರತಕ್ಕಂಥಾ ಕಷ್ಟವನ್ನು ಕೇಳಿಬಾರದೇ ? ಮಾನ್ಯ ಲಕ್ಷ್ಮೀಸಾಗರ್‌ರವರು ಇದರ ಲೀಗಾಲಿಟಿ ಬಗ್ಗೆ ಮಾತನಾಡಿದರೆ ಮಾನ್ಯ ಮಂತ್ರಿಗಳು ಇದರ ಬಗ್ಗೆ ಏನೊಂದು ಸೆನ್ಸಿಟೀವ್ ತೋರಿಸಬೇಕಾಗಿತ್ತೋ ಅದನ್ನು ತೋರಿಸಿದರೇ ? ಇದರ ಆಂಟಿಸಿಪೇಟೆಡ್ ರೆವಿನ್ಯೂ ನೋಡಿದರೆ ಈಗಾಗಲೇ ಇದರಿಂದ ೧೨ ಕೋಟಿ ರೂಪಾಯಿ ಬರುತ್ತದೆ. ಈ ದುಡ್ಡಿಗೆ ಇಂಟರೆಸ್ಟ್ ಬರುತ್ತದೋ ಇಲ್ಲ ಅದನ್ನು ಯಾರಿಗೂ ಕೊಡುವುದಿಲ್ಲ ಇವರೇ ಮಜಾ ಮಾಡುತ್ತಿದ್ದಾರೆ, ತಮಗೆ ಗೊತ್ತಿದೆ. ಯಾವುದೇ ತರಪ ಡಿಪಾಜಿಟ್ ಅನ್ನು ಬ್ಯಾಂಕ್‌ನಲ್ಲಿ ಇಟ್ಟರೆ ಅದಕ್ಕೆ ಬಡ್ಡಿ ಬರುತ್ತದೆ ಎನ್ನುವುದು ಗೊತ್ತು. ಆದರಿಂದ ಬಡತಕ್ಕಂಥಾ ಬಡ್ಡಿಯನ್ನು ಈ ಡಿಪಾಸಿಟ್‌ನವರಿಗೆ ಕೊಡಬೇಕು. ಸಾರ್ವಜನಿಕರು ಏನಾದರೂ ಡಿಪಾಸಿಟ್ ಅನ್ನು ಬ್ಯಾಂಕ್‌ನಲ್ಲಿ ಇಟ್ಟರೆ ಅದಕ್ಕೆ ಅವರಿಗೆ ಬಡ್ಡಿ ಸಿಗುವುದಿಲ್ಲವೇ ? ನೀವು ಅವರಿಗೆ ಕೊಡುವುದಾದರೂ ಏನು ? ಅದಕ್ಕೆ ನಾನು ಹೇಳುವುದೇನೆಂದರೆ ಒಂದುವೇಳೆ ಅವರಿಂದ ಶೇವಣಿ ಹಣವನ್ನು ಸಂಗ್ರಹ ಮಾಡಬೇಕೆನ್ನುವುದಾದರೆ ಆ ಜನಗಳಿಗೆ ಬಡ್ಡಿಕೊಟ್ಟು ಸಹಾಯ ಮಾಡಬೇಕು.

೧೦–೩೦ ಎ. ಎಂ.

ಆ ರೀತಿ ಏನಾದರೂ ಒಂದನ್ನು ಮಾಡುವುದು ತಪ್ಪು. ಆ ರೀತಿ ಮಾತಾಡಲೇಬೇಕು ಎಂದು ಹೇಳುವುದಾದರೆ ನಮ್ಮ ಡಿಪಾಸಿಟನ್ನು ನಾವು ಬ್ಯಾಂಕ್‌ನಲ್ಲಿ ಇಡುತ್ತೇವೆ ; ಆದನ್ನು ಕಲೆಕ್ಟ್ ಮಾಡಿಕೊಂಡು ಉಪಯೋಗಿಸಿಕೊಳ್ಳಿ. ಆದರೆ ಆ ರೀತಿ ಹೆಗಲು ದರೋಡೆ ಮಾಡತಕ್ಕಂಥಾದ್ದು ಸರಿಯಲ್ಲ. ಇವತ್ತಿನ ದಿವಸ ನೀವು ನೆರೆಯ ರಾಜ್ಯವಾದ ಆಂಧ್ರ ಪ್ರದೇಶದಿಂದ ಜಾಸ್ತಿ ಚಾರ್ಜಸ್ ಕೊಟ್ಟು ಎಲೆಕ್ಟ್ರಿಸಿಟಿಯನ್ನು ತರುತ್ತಿದ್ದೀರಿ. ಆ ಹಣವನ್ನು ಸರಿದೂಗಿಸಿಕೊಳ್ಳಲು ಅದನ್ನು ಯಾರಿಂದ ವಸೂಲು

ಮಾಡುತ್ತೀರಿ. ಅದನ್ನು ಜನಗಳಿಂದಲೇ ವಸೂಲು ಮಾಡುತ್ತೀರಿ. ಆದ್ದರಿಂದ ನಾನು ನಿಮ್ಮಲ್ಲಿ ಕೇಳಿ ಕೊಳ್ಳುವುದೇನೆಂದರೆ, ಮಂಡಲಿಯವರು ಏನು ಹೇಳುತ್ತಿದ್ದಾರೆ ಅದನ್ನು ನೀವು ಕೇಳುವುದಕ್ಕೆ ಹೋಗ ಬೇಡಿ; ಮಂಡಲಿಯವರ ಕೈಗೊಂಬೆಯಾಗಿ ಹಣವನ್ನು ಜನರಿಂದ ಲೂಟಿ ಮಾಡುವುದು ಸರಿಯಲ್ಲ. ನೀವು ಎಲ್ಲಾ ಜನತೆಗೂ ಅನುಕೂಲ ಆಗಬೇಕು ಎನ್ನತಕ್ಕಂಥ ದೃಷ್ಟಿಯಿಂದ ಕೆಲಸ ಮಾಡುತ್ತಿದ್ದೀರಿ. ಆ ಕೆಲಸವನ್ನು ಇನ್ನು ಮುಂದೆಯೂ ಮಾಡಿ; ಈ ಸೆಕ್ಯೂರಿಟಿ ಡಿಪಾಸಿಟ್ ಬಗ್ಗೆ ಒಂದು ತೀರ್ಮಾನ ಆಗುವ ವರೆಗೆ ಈ ವಿಚಾರದಲ್ಲಿ ಒಂದು ಸ್ಟೇ ಆರ್ಡರ್ ಇಷ್ಯೂ ಮಾಡಿ. ಅಲ್ಲಿಯವರೆಗೆ ಜನರಿಂದ ಯಾವುದೇ ಹಣ ವನ್ನು ಕಲೆಕ್ಟ್ ಮಾಡಬೇಡಿ ಎಂದು ನಾನು ನಿಮ್ಮಲ್ಲಿ ಒತ್ತಾಯ ಮಾಡುತ್ತಿದ್ದೇನೆ.

† ಶ್ರೀ ಎಚ್. ಗಂಗಾಧರನ್ (ಚಾಮರಾಜ).—ಮಾನ್ಯ ಅಧ್ಯಕ್ಷರೇ, ಆಗಲೇ ಮಾನ್ಯ ಮಂತ್ರಿ ಯವರು ಈ ವಿಚಾರದಲ್ಲಿ ಉತ್ತರ ಕೊಡುತ್ತಾ "Domestic installations such as lighting, All Electric Homes and I. P. Sets, Street lights and town panchayats water installations have been exempted from the payment of security amount" ಎಂದು ಹೇಳಿದ್ದಾರೆ. ಆದರೆ ನನಗೂ ಡಿಮ್ಯಾಂಡ್ ನೋಟೀಸ್ ಕೊಟ್ಟಿದ್ದಾರೆ. ನಾನು ಆ ದುಡ್ಡನ್ನು ಕಟ್ಟಿಬಿಟ್ಟು ಇಲ್ಲಿಗೆ ಬಂದಿದ್ದೇನೆ. ಹೀಗೆ ಎಲ್ಲರಿಗೂ ಡಿಮ್ಯಾಂಡ್ ನೋಟೀಸ್ ಕೊಟ್ಟಿದ್ದಾರೆ. ಈ ತರಹ ನೋಟೀಸ್ ಕೊಟ್ಟು ಎಲ್ಲರಿಂದಲೂ ಹಣವನ್ನು ಕಲೆಕ್ಟ್ ಮಾಡಿದ್ದಾರೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳಿ ಎಂದು ಹೇಳಿದಾಗ ಮಾನ್ಯ ಮಂತ್ರಿಯವರು ಹಾಗೆ ಮಾಡುತ್ತೇವೆ, ಹೀಗೆ ಮಾಡುತ್ತೇವೆ ಎಂದು ಹೇಳಿದರು. ಅವರು ಹೇಗೆ ಮಾಡುತ್ತಾರೆ ಎಂಬುದನ್ನು ನಾವು ಕಾದು ನೋಡಬೇಕಾಗಿದೆ. ಮಾನ್ಯ ಅಧ್ಯಕ್ಷರೇ, ಈ ಸಂದರ್ಭದಲ್ಲಿ ನಾವು ಗಮನಿಸಬೇಕಾದ ಇನ್ನೊಂದು ಅಂಶವೇನೆಂದರೆ ನಮ್ಮ ರಾಜ್ಯದಲ್ಲಿ ಎಲೆಕ್ಟ್ರಿಸಿಟಿ ಬೋರ್ಡ್ ಆದಮೇಲೆ ಈಗಾಗಲೇ ನಾವು ೧೨ ವಿಧವಾದ ಡಿಪಾಸಿಟ್ ಕಟ್ಟುತ್ತಿದ್ದೇವೆ. There are twelve kinds of deposits. ಈ ತರಹ ಸುಮಾರು ೭೨ ಕೋಟಿ ರೂಪಾಯಿಗಳಷ್ಟು ಡಿಪಾಸಿಟ್ ಆಗಿದೆ. ನಾವು ಏನಾದರೂ ಕೇಳಿದರೆ ಈ ತರಹದ ಡಿಪಾಸಿಟ್ ಎಂದು ಏನೋ ಒಂದು ಹೇಳುತ್ತಾರೆ. ಮಂಡಲಿಯವರು ಏತಕ್ಕೆ ಹೀಗೆ ಡಿಪಾಸಿಟ್ ಬಗ್ಗೆ ಕೇಳುತ್ತಾರೆ ಎಂಬುದು ನಮಗೆ ಅರ್ಥವಾಗಿಲ್ಲ. ಇಡೀ ರಾಜ್ಯದಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡಿ ಎಲ್ಲಾ ಕಡೆಗೂ ಸಪ್ಲೈ ಮಾಡುತ್ತಿದ್ದಾರೆ; ಸುಮಾರು ೧೧೬ ಕೋಟಿ ರೂಪಾಯಿಗಳಷ್ಟು ಪವರ್ ಸಪ್ಲೈ ಆಗುತ್ತಿದೆ. ಕಾಸ್ಟ್ ಆಫ್ ಪ್ರೊಡಕ್ಷನ್ ಆಫ್ ದಿ ಬೋರ್ಡ್ ಏನಿದೆ ಎಂದರೆ ೪೪ ಕೋಟಿ ರೂಪಾಯಿಗಳಷ್ಟು ಇದೆ ೭೦ ಕೋಟಿ ರೂಪಾಯಿಗಳು ಇದನ್ನು ಮುಟ್ಟುವುದರೊಳಗೆ ವೆಚ್ಚವಾಗು ತ್ತಿದೆ. ಅಲ್ಲದೇ ೧೮ ಕೋಟಿ ರೂಪಾಯಿಗಳಷ್ಟು ಬಡ್ಡಿಯನ್ನು ಕೊಡುತ್ತಿದ್ದಾರೆ. ಮಂಡಲಿಯವರು ಮಾಡತಕ್ಕಂಥ ವ್ಯವಹಾರದಿಂದ ಹಣದ ಆಪವ್ಯಯವಾಗುತ್ತಿದೆ. ಈ ಹಣವನ್ನು ಸರಿದೂಗಿಸಿಕೊಳ್ಳು ವುದಕ್ಕಾಗಿ ಅದನ್ನು ಜನಸಾಮಾನ್ಯರ ಮೇಲೆ ಹಾಕಿದ್ದಾರೆ. ಎಲ್ಲರಿಗೂ ನೋಟೀಸ್ ಕಳಿಸಿದ್ದಾರೆ. ೭ ಕೋಟಿ ರೂಪಾಯಿಗಳಷ್ಟು ಡಿಪಾಜಿಟ್ ಹಣವನ್ನು ಕೊಡದಿದ್ದರೆ ಲೈಟ್ ಕಿತ್ತುಹಾಕುತ್ತೇವೆ ಎಂದು ಹೇಳಿದ್ದಾರೆ. ನನಗೂ ನೋಟೀಸ್ ಬಂದಿದೆ; ನಾನು ಹಣವನ್ನು ಕಟ್ಟಿ ಬಂದಿದ್ದೇನೆ. ೧೨ ವಿಧವಾದ ಡಿಪಾಜಿಟ್ ಏನಿದೆ ಅದಕ್ಕೆ ಮಂಡಲಿಯವರು ಏನೋ ಒಂದೊಂದು ಹೆಸರು ಕೊಡುತ್ತಾರೆ. ಎಲ್ಲಿಯವರೆಗೆ ಈ ಡಿಪಾಸಿಟ್ ಹಣವನ್ನು ಹಿಡಿಯುತ್ತಾರೆ ? ೧೧೪ ಕೋಟಿ ರೂಪಾಯಿಗಳಷ್ಟು ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡಿ ಅದನ್ನು ಎಲ್ಲಾ ಕಡೆಗೆ ಮುಟ್ಟಿಸುವುದಕ್ಕೆ ೭೦ ಕೋಟಿ ರೂಪಾಯಿಗಳಷ್ಟನ್ನು ಎಕ್ಸ್‌ಟ್ರಾ ಚಾರ್ಜಸ್ ಆಗಿ ಖರ್ಚು ಮಾಡುತ್ತಿದ್ದಾರೆ; ಹೀಗೆ ಮಾಡುತ್ತಿದ್ದಾರಲ್ಲ ಇದು ಆರ್ಥಶಾಸ್ತ್ರಕ್ಕೆ ಅನುಗುಣವಾಗಿ ಬೋರ್ಡ್‌ನವರು ಮಾಡುತ್ತಿದ್ದಾರೆಯೇ ? ಅಥವಾ ವ್ಯಾಪಾರಿ ಮನೋಭಾವದಿಂದ ನಡೆಯುತ್ತಿದ್ದಾರೆಯೋ ? ಇಷ್ಟೆಲ್ಲಾ ಮಾಡಿ ಸುಮಾರು ೭೦ ಕೋಟಿ ರೂಪಾಯಿಗಳನ್ನು ಜನರಿಂದ ಡಿಪಾಸಿಟ್ ವಸೂಲು ಮಾಡಿ ಅದಕ್ಕೆ ಬಡ್ಡಿ ಹಣವನ್ನು ಕಟ್ಟದಿದ್ದರೆ ಲೈಟ್ ಕಿತ್ತು ಹಾಕುತ್ತೇವೆ ಎಂದು ಹೇಳುತ್ತಿದ್ದಾರೆ. ಈ ತರಹ ಅನ್ಯಾಯ ಆಗುವುದನ್ನು ತಪ್ಪಿಸಬೇಕೆಂದು ನಾವು ಡಿಮ್ಯಾಂಡ್ ಮಾಡುತ್ತಿದ್ದೇವೆ. ಮಂಡಲಿಯವರ ಈ ತರಹ ಕೆಲಸವನ್ನು ತಪ್ಪಿಸುವ ಪ್ರಯತ್ನವನ್ನು ಮಾನ್ಯ ಮಂತ್ರಿಯವರು ಮಾಡುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ.

---

† Indicates that remarks or speeches have not been revised by the member concerned.

ಶ್ರೀ ಕೆ. ರಾಮಭಟ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಯವರು ಈ ಐ.ಪಿ. ಸೆಟ್ ಬಗ್ಗೆ ಈ ದರವನ್ನು ಹಾಕುವುದನ್ನು ವಿನಾಯಿತಿ–ಪಡಿಸುತ್ತೇವೆಂದು ಹೇಳಿದ್ದಾರೆ ಆದರೆ ಐ.ಪಿ. ಸೆಟ್ ಇಟ್ಟುಕೊಂಡಿರತಕ್ಕಂಥ ಫಾರ್ಮರ್ಸ್‌ಗೆ ಅಧಿಕಾರಿಗಳು ಇನ್ನೊಂದು ತರಹ ಟ್ಯಾಕ್ಸ್ ಹಾಕುತ್ತಿದ್ದಾರೆ. ಇದು ಯಾವುದು ಎಂಬುದನ್ನು ನಾನು ಹೇಳುತ್ತೇನೆ. ಸಂಬಂಧಪಟ್ಟಂಥ ಡಿಪಾರ್ಟ್‌ಮೆಂಟ್ ಇನ್ಸ್‌ಪೆಕ್ಟರ್ಸ್ ನಮ್ಮ ಕಡೆಗೆ ಬರುತ್ತಾರೆ ; ಅವರು ಬಂದು ನೋಡಿ ರೈತರಿಗೆ ನೋಟೀಸ್ ಕೊಡುತ್ತಾರೆ. ೫೫ ರೂಪಾಯಿ ಇನ್ಸ್‌ಪೆಕ್ಷನ್ ಚಾರ್ಜಸ್ ಎಂದು ಹೇಳುತ್ತಾರೆ. ನಮ್ಮ ಕಡೆ ಒಬ್ಬರು ಒಂದು ಸಾರಿ ಬಂದು ೫೫ ರೂಪಾಯಿ ಚಾರ್ಜ್ ಮಾಡಿದಮೇಲೆ ಇನ್ನೊಬ್ಬರು ಬಂದು ೫೫ ರೂಪಾಯಿ ಚಾರ್ಜ್ ಮಾಡಿದ್ದಾರೆ. ಒಟ್ಟು ೧೦೦ ರೂಪಾಯಿಗಳಷ್ಟು ಇನ್ಸ್‌ಪೆಕ್ಷನ್ ಚಾರ್ಜ್ ಮಾಡಿದ್ದಾರೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಅನೇಕ ತಾಲ್ಲೂಕುಗಳಲ್ಲಿ ಈ ರೀತಿ ನಡೆಯುತ್ತಿದೆ. ಸರ್ಕಾರದವರು ರೈತರಿಗೆ ಪರಿಹಾರವನ್ನು ಕೊಡುತ್ತಿದ್ದೇವೆ ಎಂದು ಹೇಳುತ್ತಿರತಕ್ಕಂಥ ಸಂದರ್ಭದಲ್ಲಿ ಈ ಇನ್ಸ್‌ಪೆಕ್ಷನ್ ಚಾರ್ಜಸ್‌ನ್ನು ಯಾವ ಆಧಾರದ ಮೇಲೆ ಹಾಕುತ್ತಿದ್ದಾರೆಯೋ ಇದು ನಮಗೆ ಗೊತ್ತಾಗಲಿಲ್ಲ. ಅದನ್ನು ನಿಲ್ಲಿಸುತ್ತಾರೆಯೇ ಎಂದು ನಾನು ಮಾನ್ಯ ಮಂತ್ರಿಯವರನ್ನು ಕೇಳುತ್ತಿದ್ದೇನೆ.

ಶ್ರೀ ಎಚ್. ಎಲ್. ತಿಮ್ಮೇಗೌಡ (ಬಸವನಗುಡಿ)—ಮಾನ್ಯ ಅಧ್ಯಕ್ಷರೇ, ಮಾನ್ಯ ಲಕ್ಷ್ಮೀಸಾಗರ್ ರವರು ಹೇಳಿದಹಾಗೆ ಈ ಎಲೆಕ್ಟ್ರಿಸಿಟಿ ಬೋರ್ಡ್‌ನವರಿಗೆ ಮೊದಲಿನಿಂದಲೂ ಟ್ಯಾಕ್ಸೇಷನ್ ಪವರ್ ಇರಲಿಲ್ಲ. ಅವರು ಜನಗಳಿಗೆ ಈಗ ಡಿಪಾಸಿಟ್ ಇಡುವಂತೆ ಕೇಳುತ್ತಿದ್ದಾರೆ. ಮಾನ್ಯ ರಾಮದೇವ್ ರವರು ಹೇಳಿದಹಾಗೆ ಸರ್ಕಾರದವರು ಎಲೆಕ್ಟ್ರಿಸಿಟಿ ಬೋರ್ಡ್‌ನವರಿಗೆ ಏನು ದುಡ್ಡು ಕೊಡಬೇಕಾದಿದೆಯೋ ಅದನ್ನು ಕೊಡದೇ ಜನಗಳಿಂದ ಅದನ್ನು ತೆಗೆದುಕೊಳ್ಳಿ ಎಂದು ಸಲಹೆ ಮಾಡಿದ್ದರಿಂದ ಅವರು ಈ ಡಿಪಾಸಿಟ್ಟನ್ನು ಕೇಳುತ್ತಿದ್ದಾರೆ. ಇದಂ ಬಹಳ ಅನ್ಯಾಯ ಪ್ರತಿಸಾರಿಯೂ ಈ ಡಿಪಾಸಿಟ್ಟನ್ನು ಕೊಡುತ್ತ ಇದ್ದರೆ ಜನಗಳಿಗೆ ತುಂಬಾ ತೊಂದರೆಯಾಗುತ್ತದೆ. ಎಲೆಕ್ಟ್ರಿಸಿಟಿ ಇರತಕ್ಕಂಥ ಬಹಳ ಮನೆಗಳಲ್ಲಿ ಟೆನೆಂಟ್ಸ್ ಇದ್ದಾರೆ. ಅಂತಹ ಮನೆಗಳಲ್ಲಿರುವ ಟೆನೆಂಟ್ಸ್ ಈ ಡಿಪಾಸಿಟ್ಟನ್ನು ಕೊಡಬೇಕಾಗಿದೆ ಅದನ್ನು ಮನೆಗಳ ಮಾಲೀಕರು ಕೊಡುವುದಿಲ್ಲ. ಮನೆಗಳ ಒನರ್‌ಗಳಿಗೆ ಈ ಒಂದು ವಿಚಾರ ಅನ್ವಯಿಸುತ್ತೋ ಇಲ್ಲವೋ ಗೊತ್ತಿಲ್ಲ. ಬಾಡಿಗೆ ಅಂಗಡಿ ಇರತಕ್ಕಂಥವರು, ಈ ಟೆನೆಂಟ್ಸ್ ಬೆಂಗಳೂರು ಸಿಟಿಯಲ್ಲೇ ಅಲ್ಲದೆ ಬೇರೆ ಬೇರೆ ಸಿಟಿಗಳಲ್ಲೂ ಇದ್ದಾರೆ ; ಅವರು ಈ ಡಿಪಾಸಿಟ್ಟನ್ನು ಕೊಡಬೇಕಾಗುತ್ತದೆ. ಈ ಒಂದು ಅಂತರವನ್ನು ತೊಡೆದು ಹಾಕತಕ್ಕಂಥಾದ್ದು ಬಹಳ ಮುಖ್ಯ. ವಾಟರ್ ಸಪ್ಲೈ ಇನ್‌ಸ್ಟಾಲೇಷನ್ಸ್ ಟು ಟೌನ್ ಪಂಚಾಯತ್ಸ್ ಮತ್ತು ಸ್ಟ್ರೀಟ್‌ಲೈಟ್ಸ್ ಇನ್ ವಿಲೇಜಸ್—ಇವರು ಎಗ್ಸ್‌ಂಪ್‌ಷನ್ ಕೊಟ್ಟಿದ್ದೇವೆಂದು ಮಾನ್ಯ ಮಂತ್ರಿಯವರು ಹೇಳುತ್ತಿದ್ದಾರೆ. ಈ ಡಿಪಾಸಿಟ್ ವಿಚಾರದಲ್ಲಿ ಈ ಬೆಂಗಳೂರು ಸಿಟಿ ಕಾರ್ಪೋರೇಷನ್ ಮುನಿಸಿಪಾಲಿಟಿಗೆ ಎಗ್ಸ್‌ಂಪ್‌ಷನ್ ಇಲ್ಲದಿದ್ದರೆ ಟೌನ್ ಮುನಿಸಿಪಾಲಿಟಿಗಳು ಈ ಡಿಪಾಸಿಟನ್ನು ಕೊಡಬೇಕಾಗುತ್ತದೆ. ಮಾನ್ಯ ಮಂತ್ರಿಯವರು ಹೇಳಿದ ಪ್ರಕಾರ ಅದಕ್ಕೆ ಎಂಗ್ಸ್‌ಂಪ್‌ಷನ್ ಇಲ್ಲ. ಅಲ್ಲದೇ ಈಗ ಮಂತ್ಲಿ ಬಿಲ್ ಎಂದು ಇದ್ದುದನ್ನು ೬ ಮಂತ್ಸ್ ಬಿಲ್ ಎಂದು ಮಾಡಿದ್ದಾರೆ ; ನನಗೆ ಗೊತ್ತಿರುವ ಹಾಗೆ ಈ ಬಗ್ಗೆ ಒಂದು ಪರ್ಟಿಕ್ಯುಲರ್ ರೆಸಲ್ಯೂಷನ್ ಅನ್ನು K.E.B. ಅವರು ಮಾಡಿದ್ದಾರೆ. ಅದು confirmation ಆಗಿಲ್ಲ ಆದ್ದರಿಂದ ಅವರು ಈಗ ಮಂತ್ಲಿ ಬಿಲ್ ಸಹ ಮಾಡುತ್ತಾ ಇಲ್ಲ. ೬ ಮಂತ್ಸ್ ಬಿಲ್ ಸಹ ಮಾಡುತ್ತಾ ಇಲ್ಲ. ಹೀಗಾಗಿ ಕಲೆಕ್ಷನ್ ಬಹಳ ಕಡಿಮೆಯಾಗಿ ಈ ತರಹ ಆಡ್ಡದಾರಿ ಹಿಡಿದು ಡಿಪಾಸಿಟ್ ಕಲೆಕ್ಟ್ ಮಾಡುತ್ತಿದ್ದಾರೆ. ಇದರಿಂದ ಎಲ್ಲರಿಗೂ ತೊಂದರೆಯುಂಟಾಗುತ್ತಿದೆ. ಯಾರ್‍ಯಾರು ಡಿಪಾಸಿಟ್ಟನ್ನು ಕಟ್ಟಲಿಲ್ಲವೊ ಅವರಿಗೆ ಡಿಸ್‌ಕನೆಕ್ಟ್ ಮಾಡುತ್ತಿದ್ದಾರೆ. ಈ ಬಗ್ಗೆ ನನ್ನ ಸಲಹೆ ಏನೆಂದರೆ, ಯಾರಿಗೂ ಡಿಸ್‌ಕನೆಕ್ಟ್ ಮಾಡಕೂಡದು ; ಮಾರ್ಚ್ ತಿಂಗಳವರೆಗೆ ಡಿಸ್‌ಕನೆಕ್ಷನ್ ಮಾಡಬೇಡಿ ಎಂದು ಇನ್‌ಸ್ಟ್ರಕ್ಷನ್ಸ್ ಕೊಟ್ಟಿದ್ದೇವೆ ಎಂದು ಹೇಳುತ್ತಿದ್ದಾರೆ ; ಆದರೆ ಯಾರ್‍ಯಾರಿಗೆ ಡಿಸ್‌ಕನೆಕ್ಟ್ ಮಾಡಿದ್ದಾರೆ ಅವರಿಗೆ ರೀಕನೆಕ್ಷನ್ ಮಾಡಬೇಕು ಎಂದು ಹೇಳಬೇಕು. ಈ ಸಂದರ್ಭದಲ್ಲಿ ನಾನು ಇನ್ನೊಂದು ವಿಚಾರವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ನವರು ರೂರಲ್ ಡಿಬೆಂಚರ್ಸ್ ಎಂದು ರೈಸ್ ಮಾಡುತ್ತಾರೆ. ಪವರ್ ಬೋರ್ಡ್‌ನವರೂ ಕೂಡ ಕೆ.ಇ.ಬಿ. ಡಿಬೆಂಚರ್ಸ್ ಎಂದು ರೈಸ್ ಮಾಡಲಿ. ಈ ಡಿಪಾಸಿಟ್ ಮೂಲಕ ಹಣವನ್ನು ತೆಗೆದುಕೊಳ್ಳುವ ಬದಲು ಕೆ.ಇ.ಬಿ. ಡಿಬೆಂಚರ್ ಮೂಲಕ ತೆಗೆದು ಕೊಂಡು ಆ ದುಡ್ಡಿನ ಮೇಲಿನ ಬಡ್ಡಿಯನ್ನು ಕೊಡಬೇಕು ಮತ್ತು ಆ ದುಡ್ಡೂ ಸಹ ವಾಪಸ್ಸು ಈ ಕೆ.ಇ.ಬಿ. ಡಿಬೆಂಚರ್ಸ್ ಮುಖಾಂತರ ಈ ಕೆಲಸವನ್ನು ಮಾಡಬೇಕಾಗಿದೆ. ಈ ಡಿಪಾಸಿಟ್

ಮುಖಾಂತರ ಮಾಡತಕ್ಕಂಥಾದುದರಿಂದ ಹಗಲು ದರೋಡೆ ಮಾಡಿದ ಹಾಗೆ ಆಗುತ್ತದೆ. ಮಾನ್ಯ ಮಂತ್ರಿಯವರು ಇದನ್ನು ರೀಕನ್‌ಸಿಡರ್ ಮಾಡಬೇಕು. ಅಲ್ಲದೇ ಮಂತ್ರಿ ಬಿಲ್ಲನ್ನು ಮಾಡತಕ್ಕಂಥಾದ್ದನ್ನೂ ಸಹ ರೀಕನ್‌ಸಿಡರ್ ಮಾಡಬೇಕು ಮತ್ತು ಯಾರ್ಯಾರಿಗೆ ಎಗ್ಸಂಪ್‌ಷನ್ ಕೊಟ್ಟಿದ್ದಾರೋ ಅದನ್ನು ಟೌನ್ ಮುನಿಸಿಪಾಲಿಟಿ, ಸಿಟಿ ಮುನಿಸಿಪಾಲಿಟಿ ಮತ್ತು ಕಾರ್ಪೊರೇಷನ್‌ಗಳಿಗೂ ವಿಸ್ತರಣೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ.

ಶ್ರೀ ಜಿ. ಅಶ್ವತ್ಥರೆಡ್ಡಿ (ಮಾನ್ಯ ವಿದ್ಯುಚ್ಛಕ್ತಿ ರಾಜ್ಯಮಂತ್ರಿಯವರು).—ಸನ್ಮಾನ್ಯ ಅಧ್ಯಕ್ಷರೇ ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ಲಕ್ಷ್ಮೀಸಾಗರ್‌ರವರು, ರಾಮದೇವ್‌ರವರು ರಾಮಭಟ್‌ರವರು ಹಾಗೂ ಶ್ರೀ ಎಚ್. ಎಲ್. ತಿಮ್ಮೇಗೌಡರು ಮತ್ತು ಇನ್ನಿತರ ಕೆಲವು ಜನ ಸದಸ್ಯರು ಈ ಸೆಕ್ಯೂರಿಟಿ ಅವಮೌಂಟ್ ವಿಚಾರದಲ್ಲಿ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಈ ಸೆಕ್ಯೂರಿಟಿ ಅಮೌಂಟ್ ವಿಚಾರದಲ್ಲಿ ಶ್ರೀ ರಾಮದೇವ್‌ರವರು ಏನು ಹೇಳಿದರೋ ಅದು ಈ ಎಲೆಕ್ಟ್ರಿಸಿಟಿ ಆಕ್ಟ್‌ನಲ್ಲಿ ಇಲ್ಲ. ಮಾನ್ಯ ಲಕ್ಷ್ಮೀಸಾಗರ್‌ರವರು ಈ ಆಕ್ಟ್‌ನ್ನು ಅಮೆಂಡ್‌ಮೆಂಟ್ ಮಾಡಿ ಎಂದು ಹೇಳಿದರು. ೧೯೪೮ರಲ್ಲಿ ಆದಂತ ಎಲೆಕ್ಟ್ರಿಸಿಟಿ ಆಕ್ಟ್‌ನಲ್ಲಿ ಸೆಕ್ಷನ್ ೭೯ (ಜೆ)ಯಲ್ಲಿ ಅದು ಇದೆ. ಈ ಸೆಕ್ಯೂರಿಟಿ ಅಮೌಂಟನ್ನು ಕಲೆಕ್ಟ್ ಮಾಡಿ ಹಗಲು ದರೋಡೆ ಮಾಡಬೇಕು. ಜನರಿಗೆ ತೊಂದರೆಯನ್ನು ಕೊಡಬೇಕು ಎನ್ನುವ ಉದ್ದೇಶವಿಲ್ಲ. ಈ ರಾಜ್ಯದಲ್ಲಿ ರೈತರು, ಬಡವರು ಏನಿದ್ದಾರೆ ಅವರೆಲ್ಲರಿಗೂ ನಾವು ಎಲೆಕ್ಟ್ರಿಸಿಟಿ ಕೊಡಬೇಕು. ಈ ಪಂಪ್‌ಸೆಟ್ ವಿಷಯದಲ್ಲಿ ಎಲ್ಲಾ ರೈತರಿಗೂ ನಾವು ಅನುಕೂಲ ಮಾಡಿಕೊಡಬೇಕು. ಪ್ರತಿಯೊಂದು ಊರಿನಲ್ಲಿ ಇರತಕ್ಕಂಥ ಜನರಿಗೆ ನಾವು ಎಲೆಕ್ಟ್ರಿಸಿಟಿ ಕೊಡಬೇಕು ; ಪಂಪ್‌ಸೆಟ್ಟಿಗೆ ಎಲೆಕ್ಟ್ರಿಸಿಟಿ ಕೊಡಬೇಕು. ಈ ಉದ್ದೇಶದಿಂದ ಫಂಡ್ಸ್ ಜಾಸ್ತಿ ಬೇಕಾಗುತ್ತದೆ. ಇದಕ್ಕೆಲ್ಲಾ ಬೇಕಾದಷ್ಟು ಹಣ ಬೇಕಾಗುತ್ತದೆ. ಜಾಸ್ತಿ ಹಣ ಬೇಕಾಗಿದ್ದರೆ ಅದನ್ನು ಎಲೆಕ್ಟ್ರಿಸಿಟಿ ಬೋರ್ಡ್‌ನವರು ಹೊಂದಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಸರ್ಕಾರ ನಮಗೆ ೫೫ ಕೋಟಿ ರೂಪಾಯಿಗಳನ್ನು ಕೊಟ್ಟಿದೆ. ಸರ್ಕಾರ ಏನೂ ಕೊಡಲಿಲ್ಲ ಅಂತ ಅಲ್ಲ. ರಾಜ್ಯದಲ್ಲಿರತಕ್ಕಂಥ ಎಲ್ಲಾ ಜನರಿಗೂ ಈ ಒಂದು ಅನುಕೂಲತೆಯನ್ನು ಕೊಡುವ ದೃಷ್ಟಿಯಿಂದ ನಾವು ಈ ರೀತಿ ಮಾಡುತ್ತಿದ್ದೇವೆ. ಇದರಲ್ಲೂ ಕೂಡ ರೈತರಿಗೆ ಮತ್ತು ಸಣ್ಣ ಸಣ್ಣ ಮನೆಗಳಲ್ಲಿ ಈ ಎಲೆಕ್ಟ್ರಿಸಿಟಿಯನ್ನು ಬಳಕೆ ಮಾಡತಕ್ಕಂಥವರಿಗೆ ನಾವು ಎಗ್ಸಂಪ್‌ಷನ್ ಕೊಟ್ಟಿದ್ದೇವೆ.

ಮಾನ್ಯ ಅಧ್ಯಕ್ಷರೇ ನಮ್ಮ ಮಾನ್ಯ ಸದಸ್ಯರಾದಂತಹ ಶ್ರೀಮಾನ್ ಹೆಚ್. ಎಲ್. ತಿಮ್ಮೇಗೌಡರು ಹೇಳಿದರು ಪಟ್ಟಣಗಳಲ್ಲಿರತಕ್ಕಂತಹ ಸಣ್ಣ ಸಣ್ಣ ಅಂಗಡಿಯವರು ಮತ್ತು ಹೋಟೆಲ್‌ನವರು ಎರಡು ಮೂರು ಲೈಟ್‌ಗಳನ್ನು ಹಾಕಿಸಿಕೊಂಡಿರುತ್ತಾರೆ. ಅಂತಹವರು ವಿದ್ಯುತ್ಶಕ್ತಿ ಮಂಡಲಿಯವರು ನಿಗದಿ ಮಾಡಿರುವ ಸೆಕ್ಯೂರಿಟಿ ಡಿಪಾಜಿಟ್ ಹಣವನ್ನು ಕಟ್ಟುವುದಕ್ಕೆ ಬಹಳ ತೊಂದರೆಯಾಗುತ್ತದೆ ಎಂದು ಹೇಳಿದ್ದಾರೆ. ಈಗಾಗಲೇ ನಾವು ಈ ವಿಷಯದ ಬಗ್ಗೆ ಒಂದು ಚರ್ಚೆ ಮಾಡಿ ಒಂದು ತೀರ್ಮಾನ ತೆಗೆದು ಕೊಳ್ಳಬೇಕೆಂದು ನಿರ್ಧಾರ ಮಾಡಿದ್ದೇವೆ. ಇಂತಹ ಜನರು ಸುಮಾರು ೧ ಲಕ್ಷ ಅಥವಾ ೭೦ ಸಾವಿರ ಜನರು ಸಿಗಬಹುದೆಂದು ನಿರೀಕ್ಷೆ ಮಾಡಿದ್ದೇವೆ. ಮತ್ತು ಒಂದ ಕಿಲೋವಾಟ್ಸ್ ಒಳಗಡೆ ಇರುವಂತಹ ಅಂಗಡಿಯವರಿಗೆ ಮತ್ತು ಹೋಟೆಲ್‌ನವರಿಗೆ ರಿಯಾಯಿತಿ ಕೊಡಬೇಕೆಂದು ಸರ್ಕಾರದ ಉದ್ದೇಶವಿದೆ. ಈ ಒಂದು ಕೆಲಸವನ್ನು ಆದಷ್ಟು ಶೀಘ್ರದಲ್ಲಿಯೇ ಚರ್ಚೆ ಮಾಡಿ ಒಂದು ತೀರ್ಮಾನ ತೆಗೆದುಕೊಳ್ಳುತ್ತೇವೆ. ಮತ್ತು ಲೋ ಟೆನ್‌ಷನ್ ಮತ್ತು ಹೈ ಟೆನ್‌ಷನ್ ಪವರ್ ಇರುವವರ ಹತ್ತಿರವೂ ಠೇವಣಿ ಹಣವನ್ನು ವಸೂಲು ಮಾಡಬಾರದು ಎಂದು ಹೇಳಿದ್ದಾರೆ ಈ ರೀತಿಯಾಗಿ ಠೇವಣಿ ಹಣವನ್ನು ವಸೂಲು ಮಾಡದಿದ್ದರೆ ಬಹಳ ತೊಂದರೆಯಾಗುತ್ತದೆ. ಹಳ್ಳಿಗಳಲ್ಲಿರತಕ್ಕಂತಹ ಜನರಿಗೆ ಅನುಕೂಲಮಾಡಿಕೊಡ ಬೇಕು, ಹಳ್ಳಿಗಳಲ್ಲಿ ಬಡಜನರಿಗೆ ಅನುಕೂಲ ಮಾಡಿಕೊಡಬೇಕಾದರೆ ಮುಖ್ಯವಾಗಿ ನಮಗೆ ಹಣ ಬೇಕಾಗುತ್ತದೆ. ನಾವು ಯಾವ ದುರುಪಯೋಗದ ಕೆಲಸವನ್ನು ಮಾಡುತ್ತಿಲ್ಲ. ಎಲ್ಲಾ ಕೆಲಸಗಳನ್ನು ಸಹ ಸದುಪಯೋಗ ಮಾಡುತ್ತಿದ್ದೇವೆ. ಇದರಿಂದ ಎಲ್ಲಾ ಜನರಿಗೂ ಅನುಕೂಲವಾಗುತ್ತದೆ. ಈ ರೀತಿ ವಸೂಲು ಮಾಡುವುದು ತಪ್ಪು ಇದು ಅನ್ಯಾಯವೆಂದು ನಮ್ಮ ಮಾನ್ಯ ಸದಸ್ಯರಾದ ಶ್ರೀ ರಾಂದೇವ್ ರವರು ಹೇಳಿದರು. ಆದರೆ ಠೇವಣಿ ಹಣವನ್ನು ವಸೂಲು ಮಾಡುವುದಕ್ಕೆ ವಿದ್ಯುತ್ಶಕ್ತಿ ಮಂಡಲಿಯ ಆಕ್ಟ್ ೧೯೪೮ (೭೯) ಜೆ ಇದರಲ್ಲಿ ನಮಗೆ ಅಧಿಕಾರವುಂಟು. ಮತ್ತು ನಮ್ಮ ಮಾನ್ಯ ಸದಸ್ಯರಾದಂತಹ ಶ್ರೀಮಾನ್ ರಾಮಭಟ್‌ರವರು ಹೇಳಿದರು ಇನ್ಸ್‌ಪೆಕ್ಷನ್ ಚಾರ್ಜಸ್ ಕೂಡ ತೆಗೆದುಕೊಳ್ಳುತ್ತಿದ್ದಾರೆ ಎಂದು ಹೇಳಿದ್ದಾರೆ. ಇನ್ಸ್‌ಪೆಕ್ಷನ್ ಚಾರ್ಜಸ್ ಯಾರು ತೆಗೆದುಕೊಳ್ಳುತ್ತಿದ್ದಾರೆ ಅಂತಹವರ ಹೆಸರುಗಳನ್ನು ನೇರವಾಗಿ ನಮಗೆ ಕೊಟ್ಟರೆ ಅಂತಹವರ ಮೇಲೆ ನಾವು ಖಂಡಿತವಾಗಿಯೂ ಸಹ

ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಶ್ರೀಮಾನ್ ತಿಮ್ಮೇಗೌಡರು ಹೇಳಿದರು ನಗರ ಪ್ರದೇಶಗಳಲ್ಲಿರುವ ಸಣ್ಣ ಸಣ್ಣ ಅಂಗಡಿಯವರು ಮತ್ತು ಹೋಟೆಲ್‌ಗಳವರು ತೇವಣಿ ಹಣ ಕಟ್ಟುವುದಕ್ಕೆ ಕಷ್ಟವಾಗುತ್ತದೆ ಎನ್ನುವ ಒಂದು ಮಾತನ್ನು ಹೇಳಿದ್ದಾರೆ ಈ ವಿಷಯದ ಬಗ್ಗೆ ಶೀಘ್ರವಾಗಿ ಚರ್ಚೆ ಮಾಡಿ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ. ಶ್ರೀಮಾನ್ ರಾಂದೇವ್‌ರವರು ಹೇಳಿದ ರೀತಿಯಲ್ಲಿ ಏನು ಆಗಲು ದರೋಡೆ ಆಗಿಲ್ಲ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಸದಸ್ಯರು ಬೆಂಗಳೂರು ನಗರದಲ್ಲಿ ಬೆಳೆದು ಜೀವನ ಮಾಡಿಕೊಂಡು ಬರುತ್ತಿದ್ದಾರೆ. ಆದರೆ ಹಳ್ಳಿಗಾಡಿನಲ್ಲಿರ ತಕ್ಕಂತಹ ಬಡಜನರ ಕಷ್ಟ ಗೊತ್ತಿಲ್ಲವೆಂದು ಕಾಣುತ್ತದೆ. ಇವತ್ತು ಹಳ್ಳಿಗಾಡಿನಲ್ಲಿರತಕ್ಕಂತ ಹರಿಜನ ಮತ್ತು ಗಿರಿಜನ ಕೇರಿಗಳಲ್ಲಿ ಬೀದಿ ದೀಪಗಳಿಲ್ಲ ಅಂತಹವರಿಗೆ ವಿದ್ಯುತ್ ದೀಪಗಳನ್ನು ಒದಗಿಸಿ ಕೊಡಬೇಕಾಗುತ್ತದೆ.

ಶ್ರೀ ಪಿ. ರಾಂದೇವ್.—ಮಾನ್ಯ ಅಧ್ಯಕ್ಷರೇ ವಿದ್ಯುತ್ ಮಂಡಲಿಯವರು ಸಂಗ್ರಹಿಸುವ ತೇವಣಿ ಹಣವನ್ನು ಬ್ಯಾಂಕಿನಲ್ಲಿಯಾದರೂ ಇಟ್ಟರೆ ಬಡ್ಡಿ ಹಣವಾದರೂ ಗ್ರಾಹಕರಿಗೆ ಬರುತ್ತದೆ. ಆದ್ದರಿಂದ ತೇವಣಿ ಹಣವನ್ನು ಬ್ಯಾಂಕಿನಲ್ಲಿಡುವುದು ಒಳ್ಳೆಯದು.

ಶ್ರೀ ಆಶ್ವತ್ಥರೆಡ್ಡಿ.—ಬ್ಯಾಂಕಿನಲ್ಲಿ ನಾವು ಅಕೌಂಟ್ ತೆರೆಯುವುದಕ್ಕೆ ಅರ್ಧ ಹಣ ಖರ್ಚಾಗುತ್ತದೆ. ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ಮತ್ತು ಇನ್ನೂ ಕೆಲವು ಮಾನ್ಯ ಸದಸ್ಯರು ಮುಖ್ಯವಾದ ಸಲಹೆಗಳನ್ನು ಕೊಟ್ಟಿದ್ದಾರೆ.

ಶ್ರೀ ಪಿ. ರಾಂದೇವ್.—ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಹೇಳಿದ ಹಾಗೆ ಕಡ್ಡಾಯವಾಗಿ ಡಿಸ್‌ಕನೆಕ್ಟ್ ಮಾಡುವುದಿಲ್ಲ ಎಂದು ಈ ಸದನದ ಮೂಲಕ ಒಂದು ಆಸ್ವಾಸನೆಯನ್ನು ಕೊಡುತ್ತೀರಾ ?

ಶ್ರೀ ಆಶ್ವತ್ಥರೆಡ್ಡಿ.—೧೯೮೨ರ ಮಾರ್ಚಿ ತಿಂಗಳಿನವರೆಗೂ ಡಿಸ್‌ಕನೆಕ್ಷನ್ ಮಾಡುವುದಿಲ್ಲ. ಆ ನಂತರವೂ ಬೇಕಾದರೆ ಇನ್ನೂ ಒಂದು ತಿಂಗಳು ಡಿಸ್‌ಕನೆಕ್ಟ್ ಮಾಡುವುದಿಲ್ಲ.

ಶ್ರೀ ಅಜೀಜ್ ಸೇಠ್.—ಮಾನ್ಯ ಅಧ್ಯಕ್ಷರೇ ೬ ತಿಂಗಳಿಗೊಂದು ಸಾರಿ ಬಿಲ್ ಬಂದರೆ ಪಟ್ಟಣ ಗಳಲ್ಲಿರುವ ಮೂರನೆ ಮತ್ತು ನಾಲ್ಕನೇ ದರ್ಜೆಯ ನೌಕರರಿಗೆ ಹಾಗೂ ಸಾಮಾನ್ಯ ಜನರಿಗೆ ಇದರಿಂದ ತುಂಬಾ ತೊಂದರೆಯಾಗುತ್ತದೆ. ಅವರು ಕಾಲಕ್ಕೆ ಸರಿಯಾಗಿ ಹಣವನ್ನು ಕಟ್ಟದೆ ಇದ್ದ ಪಕ್ಷದಲ್ಲಿ ಡಿಸ್‌ಕನೆಕ್ಟ್ ಮಾಡುತ್ತಾರೆ. ಅವರ ಹತ್ತಿರ ಅಷ್ಟು ಹಣ ಕಟ್ಟುವುದಕ್ಕೆ ದುಡ್ಡು ಇರುವುದಿಲ್ಲ. ಇದರಿಂದ ಪಟ್ಟಣದ ಜನರಿಗೆ ತೊಂದರೆಯಾಗುತ್ತದೆ.

ಶ್ರೀ ಆಶ್ವತ್ಥರೆಡ್ಡಿ.—೬ ತಿಂಗಳಿಗೊಂದ ಸಾರಿ ಕಟ್ಟಬೇಕು ಎಂದು ಏನೂ ಇಲ್ಲ. ಬೇಕಾದರೆ ೨ವರು ೧ ತಿಂಗಳಿಗೊಂದು ಸಾರಿ ಬೇಕಾದರೂ ಕಟ್ಟಬಹುದು.

ಶ್ರೀ ಕೆ. ರಾಮಭಟ್.—ಮಾನ್ಯ ಅಧ್ಯಕ್ಷರೇ ನನ್ನ ಒಂದು ಅನುಭವದ ಪ್ರಕಾರ ಹೇಳುವುದಾದರೆ ತಿಂಗಳೊಂದಕ್ಕೆ ೮೦ ರೂಪಾಯಿಗಳು ಬಿಲ್ ಬರುತ್ತಿತ್ತು. ಆದರೆ ಈಗ ೬ ತಿಂಗಳ ಬಿಲ್ ಸಾಮಾರು ೬೦೦ ರೂಪಾಯಿಗಳು ಬಂದಿದೆ: ಇಷ್ಟು ಹಣವನ್ನು ಒಂದೇ ಬಾರಿ ಕಟ್ಟಬೇಕಾದರೆ ಕಷ್ಟವಾಗುತ್ತವೆ. ಆದ್ದರಿಂದ ಮಾನ್ಯ ಮಂತ್ರಿಗಳು ಈ ವಿಷಯವನ್ನು ಪರಿಶೀಲನೆ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ ನಾನು ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯಲು ಇಷ್ಟಪಡುತ್ತೇನೆ. ಇದು ಸಾರ್ವಜನಿಕರಿಗೆ ಸಂಬಂಧಪಟ್ಟ ಬಹಳ ಮುಖ್ಯವಾದ ಪ್ರಶ್ನೆಯಾಗಿದೆ. ಇದರಲ್ಲಿ ೧೮೦ ರೂಪಾಯಿಗಳ ತೇವಣಿ ಕಟ್ಟುವವರೂ ಒಂದು ವರ್ಗದ ಜನರಿದ್ದಾರೆ. ಇನ್ನೊಂದು ವರ್ಗದ ಜನರೆಂದರೆ ೫೨೦ ರೂಪಾಯಿಗಳ ತೇವಣಿ ಕಟ್ಟುತಕ್ಕಂತಹ ಜನರಿದ್ದಾರೆ. ಇದರಲ್ಲಿ ಈಗ ರಿಯಾಯ್ತಿ ಕೊಡಬೇಕಾದುದು ಬೀಡಿ ಅಂಗಡಿಗಳು ಮತ್ತು ಸಣ್ಣಸಣ್ಣ ಅಂಗಡಿಗಳವರು ಹಾಗೂ ಹೋಟೆಲ್‌ಗಳವರಿಗೆ ಮತ್ತು ೩ ದೀಪಗಳಿರುವವರಿಗೂ ರಿಯಾಯ್ತಿ ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಎರಡನೆಯದಾಗಿ ಹೇಳುವುದೇನೆಂದರೆ ನಗರ ಪ್ರದೇಶಗಳಲ್ಲಿರುವ ಜನರಿಗೆ ೧ ತಿಂಗಳಿಗೆ ಒಂದು ಬಾರಿ ಬಿಲ್ ಕಟ್ಟುವ ವ್ಯವಸ್ಥೆಯನ್ನು ಮಾಡಿ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿರುವ ಜನತೆಗೆ ೬ ತಿಂಗಳಿಗೊಂದು ಸಾರಿ ವಿದ್ಯುತ್ತಿಗೆ ಬಿಲ್ ಕಟ್ಟುವ ವ್ಯವಸೆ ಯನ್ನು ಮಾಡಿದರೆ ಎಲ್ಲರ ಸಮಸ್ಯೆಯು ಪರಿಹಾರವಾಗಿ ಅನುಕೂಲವಾಗುತ್ತದೆ. ಈ ಒಂದು ವ್ಯವಸ್ಥೆಯನ್ನು ಮಾನ್ಯಮಂತ್ರಿಗಳು ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಈಗ ಸರ್ಕಾರ ಈ ಸಮಸ್ಯೆಯನ್ನು ಗಮನಕ್ಕೆ ತೆಗೆದುಕೊಂಡು ರಿಯಾಯ್ತಿ ಕೊಡುವುದರಲ್ಲಿ ನಮ್ಮದೇನು ಆಭ್ಯಂಥರವಿಲ್ಲ. ಮುಂದಿನ ವರ್ಷ ಅಂದರೆ ೧೯೪೩ನೇ ಇಸವಿಯಿಂದ ಪ್ರತಿ ೧೦ ವರ್ಷಗಳಿಗೆ ಸೆಕ್ಯೂರಿಟಿ ಡಿಪಾಜಿಟನ್ನು ಕಲೆಕ್ಟ್ ಮಾಡಿ ಎಂದು ತೀರ್ಮಾನ ಮಾಡಿದ್ದಾರೆ. ಈ ಸೆಕ್ಯೂರಿಟಿ ಡಿಪಾಜಿಟ್ ಕಲೆಕ್ಟ್ ಮಾಡುವುದಕ್ಕೆ ಒಂದು ತಳಹದಿ ಇರಬೇಕು. ಮತ್ತು ಆಡ್ವಾನ್ಸ್‌ನ್ನು ಸಹಾ ತೆಗೆದುಕೊಳ್ಳುತ್ತಿದ್ದಾರೆ. ಸರ್ಕಾರದವರು ೧೫ ಕೋಟಿ ರೂಪಾಯಿಗಳನ್ನು ಡಿಸೆಂಬರ್ ೧೮ ವೇಳೆಗೆ ಒಂದು ಪೈಸಾನು ಕೊಟ್ಟಿಲ್ಲ. ಸರ್ಕಾರದವರು ಹಣವನ್ನು ಕೊಡದೆ ಡಿಪಾಜಿಟ್ ಕಲೆಕ್ಟ್ ಮಾಡಿ ಎಂದು ಹೇಳುವುದರಲ್ಲಿ ಅರ್ಥವಿಲ್ಲ.

SRI Y. RAMAKRISHNA. –Whether the power of the Government to amend the regulation is constitutionally legal or not, the matter is pending before the High Court. Let it give its decision and we will accept it,

SRI A. LAKSHMISAGAR.—Pending decision of the High Court, let it be kept in abeyance.

SRI Y. RAMAKRISHNA.—That depends on the order of the High Court.

SRI A. LAKSHMISAGAR.— But pending decision of the High Court why don't you keep this in abeyance? I want you to recall to you mind the fault committed by the Government in collecting market cess. When the High Court struck down, it was impossible for you to recover.

SRI Y. RAMA KRISHNA.—Government has no power to amend the regulation. The matter is pending before the High Court and the Government is prepared to accept the decision given by the Court. Till then let it continue.

SRI A. LAKSHMISAGAR.—Till then let it be kept in abeyance.

ಶ್ರೀ ಅಶ್ವತ್ಥರೆಡ್ಡಿ —ಮಾನ್ಯ ಸದಸ್ಯರಾದಂತಹ ಶ್ರೀಮಾನ್ ಬೊಮ್ಮಾಯಿಯವರು ಹೇಳಿದರು ಪಸ್ಟ್ ಫೇಜ್ ಸೆಕೆಂಡ್ ಫೇಜ್ ನವರಿಗೆ ಹೆಚ್ಚಿನ ಅನುಕೂಲ ಮಾಡಬೇಕು ಮತ್ತು ಸಣ್ಣ ಸಣ್ಣ ಅಂಗಡಿಯವರಿಗೆ ಹಾಗೂ ಹೋಟೆಲ್‌ನವರಿಗೂ ಹಾಗೂ ಪಿ ದೀಪಗಳಿರುವವರಿಗೆ ಅನುಕೂಲ ಮಾಡಿಕೊಡಬೇಕೆಂದು ನಾವು ಈಗಾಗಲೇ ಚರ್ಚೆ ಮಾಡಿ ಶೀಘ್ರದಲ್ಲಿ ತೀರ್ಮಾನ ತೆಗೆದುಕೊಳ್ಳುತ್ತೇವೆ. ಇಂತಹವರು ಸುಮಾರು ೧ ಲಕ್ಷ ಜನರು ಸಿಗಬಹುದು. ಅಂತಹವರಿಗೆ ಅನುಕೂಲ ಮಾಡಿಕೊಡಬೇಕೆಂದು ಸರ್ಕಾರದ ಆಲೋಚನೆಯಲ್ಲಿ ಇದೆ. ಅವರು ಕೋರ್ಟಿನಲ್ಲಿದೆ ಎಂದು ಹೇಳುತ್ತಾರೆ. ಕೋರ್ಟಿಗೆ ಕೆಲವು ಜನ ಹೋಗಿರುತ್ತಾರೆ. ಸರ್ಕಾರಕ್ಕೆ ಅನುಕೂಲ ಮಾಡಬೇಕೆಂಬ ಆಸೆ ಇದೆ. ದೊಡ್ಡ ದೊಡ್ಡ ಇಂಡಸ್ಟ್ರಿಯಲಿಸ್ಟ್ ಹೋಗಿದ್ದಾರೆಂದರೆ ಇಂಡಸ್ಟ್ರೀಯಲಿಸ್ಟ್ ಹತ್ತಿರ ವಸೂಲು ಮಾಡುವುದು ಕಷ್ಟವಿದೆ. ಏಕೆಂದರೆ, ದಿನನಿತ್ಯ ಕೆಲಸಮಾಡಬೇಕಾಗುತ್ತದೆ.

SRI P. RAMADEV.—We don't plead for the industrialists. We are pleading for small consumers.

ಶ್ರೀ ಜಿ. ಅಶ್ವತ್ಥರೆಡ್ಡಿ.—ಅಂಥವರೇ ಕೋರ್ಟಿಗೆ ಹೋಗಿದ್ದಾರೆ. ಅವರೊಬ್ಬರ ಹತ್ತಿರ ಬಿಟ್ಟು ಬೇರೆಯವರ ಹತ್ತಿರ ವಸೂಲು ಮಾಡುತ್ತೇವೆ. ಸಂತೋಷವಾಗಿ ಕೊಡುತ್ತಾರೆ.

ಅಧ್ಯಕ್ಷರು.—ಮಾನ್ಯ ಬೊಮ್ಮಾಯಿಯವರು ರೂರಲ್ ಏರಿಯಾಗೆ ಬೇರೆ, ಅರ್ಬನ್ ಏರಿಯಾಗೆ ಬೇರೆ ಮಾಡುತ್ತೀರಾ ಎಂದು ಹೇಳಿದ್ದಾರೆ.

ಶ್ರೀ ಜಿ. ಅಶ್ವತ್ಥ ರೆಡ್ಡಿ.—ಎಲೆಕ್ಟ್ರಿಸಿಟಿಯನ್ನು ಆಂಧ್ರದಿಂದ ಜಾಸ್ತಿ ಬೆಲೆಗೆ ತಂದಿದ್ದೇವೆ.

ಶ್ರೀ ಎ. ಲಕ್ಷ್ಮೀಸಾಗರ್.—ಸೆಕ್ಯೂರಿಟಿ ಡಿಮ್ಯಾಂಡ್ ಅಲ್ಲಿ ಇಲ್ಲ ಎಂದು ಹೇಳಿದೆ.

ಶ್ರೀ ಜಿ. ಅಶ್ವತ್ಥರೆಡ್ಡಿ.—ಇಂಡಸ್ಟ್ರಿಯಲಿಸ್ಟ್ಸ್ ೬೦ ಪೈಸೆಗೆ ಕೊಟ್ಟರೂ ತೆಗೆದು ಕೊಳ್ಳುತ್ತಾರೆ. ಆ ಪ್ರಶ್ನೆ ಇಲ್ಲ. ಮಾನ್ಯ ಬೊಮ್ಮಾಯಿಯವರು ರೂರಲ್ ಏರಿಯಾಗೆ ೬ ಮಂತ್ಸ್ ಮತ್ತು ಅರ್ಬನ್‌ಗೆ ಮಂತ್ಲಿ ಬಿಲ್ ಮಾಡುತ್ತೀರಾ ಎಂದು ಹೇಳಿದರು. ಆ ವಿಷಯದ ಬಗ್ಗೆ ನಾವು ಚರ್ಚೆಮಾಡಿ ಜನಗಳಿಗೆ ಒಳ್ಳೆಯದಾಗುವಂಥ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

೩೧೨ನೇ ನಿಯಮದ ಮೇರೆಗಿನ ವಿಷಯ

ವಿದ್ಯುತ್ ಚಾಲಿತ ಮತ್ತು ಕೈಮಗ್ಗಗಳ ಉದ್ಯಮದಲ್ಲಿ ತೊಡಗಿರತಕ್ಕ ನೌಕರರ ತೊಂದರೆ ಬಗ್ಗೆ

ಶ್ರೀ ಕೆ. ಹೆಚ್. ಶ್ರೀನಿವಾಸ್ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೆ, ಕಚ್ಚಾ ರೇಷ್ಮೆ ಅಭಾವ ಮತ್ತು ಅದರ ಕೈಗೆ ಎಟುಕದಮಟ್ಟಿಗೆ ಏರಿರುವ ಬೆಲೆ—ಇದರಿಂದಾಗಿ ಈ ರೇಷ್ಮೆ ಉದ್ಯಮದಲ್ಲಿ ತೊಡಗಿರತಕ್ಕ ವಿದ್ಯುತ್‌ಚಾಲಿತ ಮಗ್ಗಗಳ ಮತ್ತು ಕೈಮಗ್ಗಗಳ, ಮುಖ್ಯವಾಗಿ ಕೆಲಸಮಾಡುತ್ತಾ ಇರತಕ್ಕ ನೌಕರರಿಗೆ ಉಂಟಾಗಿರುವಂಥ ತೀವ್ರ ತೊಂದರೆಯನ್ನು ಈ ಸಂದರ್ಭದಲ್ಲಿ ಪ್ರಸ್ತಾಪಮಾಡಲಿಕ್ಕೆ ಬಯಸುತ್ತೇನೆ. ಈ ಬಗ್ಗೆ ಬಹಳ ಕಾಲದಿಂದ ನೇಕಾರರು ಕ್ರಿಯಾ ಸಮಿತಿಯನ್ನು ಮಾಡಿಕೊಂಡು ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿ, ನಮಗೆಲ್ಲರಿಗೂ ಮನವಿಯನ್ನು ಕೊಟ್ಟಿದ್ದಾರೆ. ಅದರಲ್ಲಿ ಅನೇಕ ಕಾರಣಗಳನ್ನು ಪ್ರಸ್ತಾಪಮಾಡಿದ್ದಾರೆ. ಮತ್ತು ಸರ್ಕಾರ ಒಳ್ಳೆಯ ಉದ್ದೇಶವನ್ನಿಟ್ಟುಕೊಂಡು ರೇಷ್ಮೆ ವಿನಿಮಯ ಕೇಂದ್ರವನ್ನು ಏನು ಮಾಡಿದರು ಆ ರೇಷ್ಮೆ ವಿನಿಮಯ ಕೇಂದ್ರ ಸರಿಯಾದ ರೀತಿಯಲ್ಲಿ ಕಾರ್ಯನಿರ್ವಹಣೆ ಮಾಡುತ್ತಾ ಇಲ್ಲ, ಇದರಿಂದಾಗಿ ಅನೇಕ ತೊಂದರೆಗಳಾಗಿದೆ ಎಂದು ಪ್ರಸ್ತಾಪಮಾಡಿದ್ದಾರೆ. ನಾನು ಆ ವಿಷಯದ ಸತ್ಯಾಸತ್ಯತೆಯ ಬಗ್ಗೆ ಏನನ್ನೂ ಹೇಳಲಿಕ್ಕೆ ತಯಾರಿಲ್ಲ. ಏಕೆಂದರೆ, ಅದರ ಬಗ್ಗೆ ನಾನು ವಿಶೇಷವಾಗಿ ಅಧ್ಯಯನ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಆದರೆ ಒಟ್ಟಿನಲ್ಲಿ ಇದರ ತಾತ್ಪರ್ಯ ಸ್ಪಷ್ಟವಾಗಿ ಕಾಣುತ್ತಾ ಇರತಕ್ಕಂಥಾದ್ದು ೧೯೮೧ನೆ ಜನವರಿ ನಂತರ ಮತ್ತು ಅದರ ಹಿಂದೆ ೨೨೫ ರೂಪಾಯಿ ೩೦೦ ರೂಪಾಯಿ ಒಂದು ಕೆ. ಜಿ. ಕಚ್ಚಾ ರೇಷ್ಮೆಗೆ ಇದ್ದಂಥ ಬೆಲೆಗಳು ೫೫೦ ರೂಪಾಯಿಯಿಂದ ಸುಮಾರು ೭೦೦ ರೂಪಾಯಿವರೆಗೆ ಹೆಚ್ಚಾಗಿದೆ. ಅಲ್ಲದೆ ಅದರ ಪೂರೈಕೆಯೂ ಕೂಡ ಬಹಳ ಕನಿಷ್ಟ ಪ್ರಮಾಣದಲ್ಲಿದೆ. ಯಾರು ಈ ಉದ್ಯಮವನ್ನು, ಕಸುಬನ್ನು ಅವಲಂಬಿಸಿ ಸ್ವತಃ ಕೆಲಸಮಾಡತಕ್ಕ ಜನರಿದ್ದಾರೆ ಆ ಜನಗಳಿಗೆ ಕಚ್ಚಾ ರೇಷ್ಮೆ ದೊರೆಯದೆ ಇರತಕ್ಕೆ ಪರಿಸ್ಥಿತಿ ನಿರ್ಮಾಣವಾಗಿದೆ. ಮತ್ತೆ ಸಿಲ್ಕ್ ಎಕ್ಸ್‌ಚೇಂಜನ್ನು ತೆಗೆದು ಹಾಕಿ, ಮತ್ತೊಂದು ಮಾಡಬೇಕಾಗಿದೆ ಎಂಬ ವಿಷಯವೆನ್ನು ನಾನ್ನು ಹೇಳುವುದಿಲ್ಲ. ಏಕೆಂದರೆ ಅದು ಅಷ್ಟು ಸುಲಭವಾಗಿ ಹೇಳಲಿಕ್ಕೆ ಬರತಕ್ಕ ವಿಚಾರವಲ್ಲ. ಆದರೆ ಈ ದಿಸೆಯಲ್ಲಿ ಸರ್ಕಾರ ಈ ವಿಷಯವನ್ನು ತೀವ್ರವಾಗಿ ಪರಿಶೀಲಿಸಿ ಒಂದು ಪರಿಹಾರವನ್ನು ಯಾವುದೇ ಒಂದು ಕ್ರಮವನ್ನಾದರೂ ಕೈಗೊಂಡು ಮಾಡಬೇಕಾದ್ದು ಅಗತ್ಯವಿದೆ. ಯಾರು ಈ ದುಡಿಮೆಯಲ್ಲಿ ತೊಡಗಿರತಕ್ಕ ಜನ ಇದ್ದಾರೆ ಅವರಿಗೆ ಒಂದು ನಿಯಂತ್ರಿತ ಬೆಲೆಯಲ್ಲಿ ಕನಿಷ್ಟಪಕ್ಷ ಈ ಉದ್ಯಮದಲ್ಲಿ ತಮ್ಮ ಜೀವನವನ್ನು ನಡೆಸಿಕೊಂಡು ಹೋಗತಕ್ಕ ರೀತಿಯಲ್ಲಿ ಕಚ್ಚಾ ರೇಷ್ಮೆಯನ್ನು ತಕ್ಷಣ ಪೂರೈಕೆ ಮಾಡುವ ಬಗ್ಗೆ ಸರ್ಕಾರ ತೀವ್ರವಾಗಿ ಗಮನಹರಿಸಬೇಕು ಕೇವಲ ಅವರಿಗೆ ತೊಂದರೆಯಾಗಿದೆ, ಇವರಿಗೆ ತೊಂದರೆಯಾಗಿದೆ ದೊಡ್ಡವರಿಗೆ ತೊಂದರೆಯಾಗಿದೆ, ಎನ್ನುವ ವಾದವಿವಾದ ನಮ್ಮ ಕವಿಯ ಮೇಲೆ ಬಿದ್ದಿದೆ. ಎಲ್ಲಕ್ಕಿಂತ ಮುಖ್ಯವಾಗಿ ಈ ಉದ್ಯಮವನ್ನು ನಂಬಿ, ಬೆವರು ಸುರಿಸಿ ಬದುಕುವುದಕ್ಕೆ ಪ್ರಯತ್ನ ಮಾಡತಕ್ಕಂಥ ಬಡ ಕಾರ್ಮಿಕರಿಗೆ ಇದರಿಂದ ಅನ್ಯಾಯವಾಗಿದೆ. ಇವರ ಸಮಸ್ಯೆಯ ಜೊತೆಗೆ ತಮ್ಮದನ್ನೂ ಸೇರಿಸಿ ಲಾಭ ಮಾಡುವುದಕ್ಕೆ ಪ್ರಯತ್ನ ಮಾಡತಕ್ಕವರು ಬೇಕಾದಷ್ಟು ಜನ ಇದ್ದಾರೆ. ಅವರನ್ನು ಹೇಗೆ ಬೇರ್ಪಡಿಸಬೇಕು, ಲಾಭ ಹೊಡೆಯದ ಹಾಗೆ ಏನು ನೂಡಬೇಕು ಎಂಬ ಜಾಣ್ಮೆ, ವಿವೇಕ ಸರ್ಕಾರಕ್ಕೆ ಬಿಟ್ಟಿರತಕ್ಕಂಥಾದ್ದು. ಬಡ ನೇಕಾರರ ಕಷ್ಟವನ್ನು ನೋಡಿಕೊಂಡು ಕುಳಿತುಕೊಳ್ಳುವುದು ಸರಿಯಲ್ಲ. ಆದುದರಿಂದ ನೇಕಾರರ ನೆರವಿಗೆ ಸರ್ಕಾರ ತೀವ್ರವಾದ ರೀತಿಯಲ್ಲಿ ಧಾವಿಸಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ.